**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 21/2023**

ಪಿ ಡಬ್ಲ್ಯೂ-1

**ದಿನಾಂಕ 29-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಕೆ. ಪಿ.ಎಮ್ ಪ್ರತಿವಾದಿ ಪರ ವಕೀಲರುಃ**

ದಾವಾ ಷೆಡ್ಯೂಲ್ ಸ್ವತ್ತುಗಳು 40-50 ಲಕ್ಷ ಬೆಳೆಬಾಳುತ್ತವೆ ಎಂದರೆ ಸರಿ. ನಾನು ಸಲ್ಲಿಸಿರುವ ನಿಪಿ-1 ರ ವಂಶವೃಕ್ಷ ಸುಳ್ಳು ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಕೇಳಿರುವ (ಈ) ಪರಿಹಾರವನ್ನು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾದಲ್ಲಿ ಹೇಳಿರುವ ಹಾಗೆ ಸಿದ್ದಯ್ಯನವರನ್ನು ವಡ್ಡರಹಳ್ಳಿ ಸಿದ್ದಯ್ಯ ಊರ್ಫ ಕೆಂಗಯ್ಯ ಎಂದು ಕರೆಯುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ಹೇಳಿರುವ ಹಾಗೇ ಸಿದ್ದಯ್ಯ ನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ.

2. ನಾನು ದಾವೆಯಲ್ಲಿ ತೋರಿಸಿರುವ ದೇವಮ್ಮ ಸಿದ್ದಯ್ಯನವರು 2 ನೇ ಪತ್ನಿ ಎಂದು ತೋರಿಸಲು ಲಗ್ನ ಪತ್ರಿಕೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಸಿದ್ದಯ್ಯನವರಿಗೆ ಕೇವಲ ಸಿದ್ದಮ್ಮ ಒಬ್ಬರೇ ಪತ್ನಿ ಎಂದರೆಸ ರಿಯಲ್ಲ. ಸಾಕ್ಷಿ ಮುಂದುವರೆದು ಅವರ ಆರೋಗ್ಯ ಸರಿಯಿಲ್ಲ ಎಂದು ದೇವಮ್ಮರವರನ್ನು ಮದುವೆಮಾಡಿಕೊಂಡಿರುತ್ತಾರೆ. ಸಿದ್ದಯ್ಯ ಮತ್ತು ಸಿದ್ದಮ್ಮ ರವರಿಗೆ ಒಟ್ಟು ತಾಯಮ್ಮ, ಕುಳ್ಳಸಿದ್ದಯ್ಯ, ಸಾವಿತ್ರಿ ಮತ್ತು ಶಿವಣ್ಣ 4 ಜನ ಮಕ್ಕಳು ಎಂದರೆ ಸರಿ.

3. ಮೊದಲನೇಯ ಮಗಳು ತಾಯಮ್ಮ ಮೃತ ಪಟ್ಟಿದ್ದು ಅವರ ಗಂಡ ಶಿವಣ್ಣನನು ಸಹ ಮೃತ ಪಟ್ಟಿರುತ್ತಾನೆ. ತಾಯಮ್ಮ ಮತ್ತು ಶಿವಣ್ಣನಿಗೆ 3 ಜನ ಮಕ್ಕಳು ಅವರುಗಳೆಂದರೆ ಕಾಮೇಶ, ಮಂಗಳ ಮತ್ತು ಮರೀಯ ಎಂದರೆ ಸರಿ. ದಾವಾ ಸ್ವತ್ತುಗಳು ಸಿದ್ದಯ್ಯ ರವರು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಸಿದ್ದಯ್ಯ ರವರು ಮೃತ ಪಟ್ಟ ನಂತರ ಅವರ ಹೆಂಡತಿ ಸಿದ್ದಮ್ಮ ಮತ್ತು ಮಕ್ಕಳು ದಾವಾ ಸ್ವತ್ತನ್ನು ಅನುಭವಿಸುತ್ತಿದ್ದಾರೆ ಎಂದರೆ ನಾವು ಸಹ ಅನುಭವಿಸುತ್ತಿದ್ದೇವೆ ಎಂದು ತಿಳಿಸಿರುತ್ತಾರೆ.

4. ಸಿದ್ದಯ್ಯ ರವರ ತಂದೆಯ ಹೆಸರು ಕೆಂಗಯ್ಯ. ನಾನು ಹಾಜರು ಪಡಿಸಿರುವ ಪಹಣಿಗಳಲ್ಲಿ ಸಿದ್ದಯ್ಯನ ತಂದೆಯ ಹೆಸರು ಹೊನ್ನಯ್ಯ ಎಂದು ನಮೂದಾಗಿದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು, ಅಧಿಕಾರ ಮತ್ತು ಭಾಗಾಂಶ ಇಲ್ಲ ಎಂದರೆ ಸರಿಯಲ್ಲ. ಸಿದ್ದಯ್ಯ ರವರ ಬದುಕಿದ್ದಾಗಲೇ ಅವರ 4 ಜನ ಮಕ್ಕಳು ಸ್ವತ್ತುಗಳನ್ನು ವಿಭಾಗವನ್ನು ಮಾಡಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ನಾವು ಸಹ ಅನುಭೋಗದಲ್ಲಿದ್ದೇವೆ ಎಂದು ತಿಳಿಸಿರುತ್ತಾರೆ.

5. ನಾವು ಸಿದ್ದಯ್ಯರವರಿಗೆ ಸಂಬಂಧಿಸಿದ ಕುಟುಂಬ ಜೀವಿತ ಸದಸ್ಯರ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾವು ಸಿದ್ದಯ್ಯರವರ ವಾರಸುದಾರರು ಎಂದು ತೋರಿಸಲು ಸೂಕ್ತ ತಾಲ್ಲೂಕು ಕಚೇರಿಯಲ್ಲಿ ನೀಡುವ ಕುಟುಂಬ ಜೀವಿತರ ಸದಸ್ಯರ ಪಟ್ಟಿಯನ್ನು ಸಲ್ಲಿಸಿದ ಕಾರಣ ನಾವು ಸಿದ್ದಯ್ಯರವರ ವಾರಸುದಾರರು ಅಲ್ಲ ಎಂದರೆ ಸರಿಯಲ್ಲ. ನಾವು ಸಿದ್ದಯ್ಯ 2 ನೇ ಹೆಂಡತಿಯ ಮಕ್ಕಳು ಎಂದು ಸಾಬೀತುಪಡಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

6.ನಾವು ದಾವೆಯಲ್ಲಿ ಕೇಳಿರುವ 1/7 ನೇ ಭಾಗ ಪರಿಹಾರವು ಊರ್ಜಿತವಲ್ಲ ಎಂದರೆ ಸರಿಯಲ್ಲ. ನಮಗೆ ದಾವಾಸ್ವತ್ತುಗಳ ಚೆಕ್ ಬಂದಿ ನನಗೆ ಗೊತ್ತಿಲ್ಲ ಅಕ್ಕಪಕ್ಕದಲ್ಲಿರುವ ಹೆಸರುಗಳನ್ನು ಹೇಳುತ್ತೇನೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ